■ ವಿಶಾಖ ಎನ್.



# ‘ಅನುಷ್ಕಾ ಬೇಡ’ ಎಂದಿದ್ದ ಗತಸತ್ಯ

ಕೆಲವರ ವೃತ್ತಿಬದುಕಿಗೆ ಪೂರ್ಣವಿರಾಮ ಹಾಕುವ ಪ್ರಯತ್ನಗಳ ಕುರಿತ ಹಳೆಯ ಕಥೆಗಳು ಈಗ ರೆಕ್ಕೆಪುಕ್ಕ ಪಡೆದುಕೊಳ್ಳುತ್ತಿವೆ. ಪ್ರಿಯಾಂಕಾ ಚೋಪ್ರಾ ತಮ್ಮನ್ನು ಚಿತ್ರೋದ್ಯಮದ ದಿಗ್ಗಜರೇ ಹೇಗೆ ವ್ಯವಸ್ಥಿತವಾಗಿ ಮೂಲೆಗುಂಪು ಮಾಡಿದ್ದರು ಎನ್ನುವುದನ್ನು ಹೇಳಿದ ಮೇಲೆ ಅಂಥದ್ದೇ ಕೆಲವು ಕುತೂಹಲಕಾರಿ ವಿದ್ಯಮಾನಗಳನ್ನು ಚಿತ್ರೋದ್ಯಮ ಮೆಲುಕುಹಾಕತೊಡಗಿದೆ.

ಅನುಷ್ಕಾ ಶರ್ಮ ವೃತ್ತಿಬದುಕನ್ನು ಶುರುವಾಗುವ ಮೊದಲೇ ಹೊಸಕಿಹಾಕಲು ತಾವು ಹಿಂದೊಮ್ಮೆ ಪ್ರಯತ್ನಪಟ್ಟಿದ್ದನ್ನು ಕರಣ್ ಜೋಹರ್ ಹೇಳಿಕೊಂಡಿದ್ದರು. ಆ ಸುದ್ದಿ ಈಗ ಹರಿದಾಡಿ, ಇನ್ನೊಂದು ತಲೆಮಾರಿನ ಹುಡುಗ–ಹುಡುಗಿಯರು ಕಣ್ಣರಳಿಸುವಂತೆ ಮಾಡುತ್ತಿದೆ.

‘ರಬ್ ನೆ ಬನಾ ದೀ ಜೋಡಿ’ ಹಿಂದಿ ಸಿನಿಮಾಗೆ ನಾಯಕಿಯಾಗಿ ಅನುಷ್ಕಾ ಅವರನ್ನು ಆಯ್ಕೆ ಮಾಡಿದ್ದವರು ಆದಿತ್ಯ ಚೋಪ್ರಾ. ಅವರು ತಮ್ಮ ಹೊಸ ನಾಯಕಿಯ ಫೋಟೊವನ್ನು ಕರಣ್‌ಗೆ ತೋರಿಸಿದ್ದರು. ಅದನ್ನು ನೋಡಿದ್ದೇ, ‘ಈ ನಾಯಕಿಯನ್ನು ಯಾಕಾದರೂ ಆಯ್ಕೆ ಮಾಡಿದೆ ಮಾರಾಯ? ನನ್ನ ಕೇಳಿದ್ದರೆ ಸೂಕ್ತವಾದ ಇನ್ನೊಬ್ಬ ನಾಯಕಿಯನ್ನು ಸೂಚಿಸುತ್ತಿದ್ದೆ’ ಎಂದು ಕರಣ್ ಪ್ರತಿಕ್ರಿಯಿಸಿದ್ದರು.

‘ರಬ್ ನೆ ಬನಾ ದೀ ಜೋಡಿ’ ಸಿನಿಮಾ ನೋಡಿದ ಮೇಲೆ ಶಾರುಖ್ ಸಮಕ್ಕೂ ಅನುಷ್ಕಾ ನಟಿಸಿದ್ದು ಕರಣ್‌ಗೆ ಅರಿವಾಯಿತಂತೆ. ಅಷ್ಟೇ ಅಲ್ಲ, ‘ಬ್ಯಾಂಡ್ ಬಾಜಾ ಬಾರಾತ್’ ಚಿತ್ರ ಈ ನಟಿಯ ಕುರಿತು ತಮಗೆ ಇದ್ದದ್ದು ಪೂರ್ವಗ್ರಹ ಎನ್ನುವುದನ್ನು ಖಚಿತಪಡಿಸಿತಂತೆ.

ಖುದ್ದು ಕರಣ್, ಅನುಷ್ಕಾ ಅವರಿಗೆ ಈ ಸಂಗತಿಯನ್ನು ಹೇಳಿಕೊಂಡು, ಕ್ಷಮೆ ಕೂಡ ಕೇಳಿದ್ದರು. ಆಮೇಲೆ ‘ಯೇ ದಿಲ್ ಹೈ ಮುಷ್ಕಿಲ್’ ಸಿನಿಮಾದಲ್ಲಿ ಇದೇ ನಟಿಗೆ ಪಾತ್ರವನ್ನೂ ಕೊಟ್ಟರು. ■

# ಹೃತಿಕ್ ಜೊತೆ ಜೂನಿಯರ್ ಎನ್‌ಟಿಆರ್?





ಸಿದ್ಧಾರ್ಥ್ ಆನಂದ್ ನಿರ್ದೇಶನದ ‘ವಾರ್’ ಹಿಂದಿ ಸಿನಿಮಾ ತೆರೆಕಂಡಿದ್ದು ಕೋವಿಡ್ ಸಾಂಕ್ರಾಮಿಕ ವ್ಯಾಪಿಸುವ ವರ್ಷದ ಮೊದಲು. ಸಾಹಸಪ್ರಧಾನ ದೃಶ್ಯಗಳು, ಮೈನವಿರೇಳಿಸುವ ನೃತ್ಯ ಲಾಲಿತ್ಯ ಒಳಗೊಂಡಿದ್ದ ಈ ಸಿನಿಮಾ ಮೂರು ತಲೆಮಾರಿನ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತು. ಯೌವನದ ಹಿತ್ತಲಿನಲ್ಲಿ ಇರುವವರಿಗೆ ಹೃತಿಕ್ ರೋಷನ್ ಹಿಡಿಸಿದರೆ, ಟೈಗರ್ ಶ್ರಾಫ್ ಪಲ್ಟಿ ಹೊಡೆಯುವ ಪರಿಗೆ ಚಿಣ್ಣರು ‘ವಾಹ್’ ಎಂದು ಉದ್ಗಾರ ತೆಗೆದಿದ್ದರು.

ಯಶ್‌ರಾಜ್ ನಿರ್ಮಾಣ ಸಂಸ್ಥೆಯು ಪತ್ತೇದಾರಿ ಶೈಲಿಯ ಕಥನಗಳನ್ನು ಒಳಗೊಂಡ ಸಿನಿಮಾಗಳಿಂದಲೇ ಮಾರುಕಟ್ಟೆ ವಿಸ್ತರಿಸಿಕೊಳ್ಳತೊಡಗಿ ದಶಕವೇ ಆಯಿತು. ‘ಏಕ್ ಥಾ ಟೈಗರ್’, ‘ಟೈಗರ್ ಜಿಂದಾ ಹೈ’ ಎರಡೂ ದೊಡ್ಡ ಮೊತ್ತದ ಹಣ ದಕ್ಕಿಸಿಕೊಟ್ಟಮೇಲೆ ‘ವಾರ್’ ಸದ್ದು ಮಾಡಿದ್ದರಿಂದ ಅಂಥದ್ದೇ ಜಾಯಮಾನದ ಸಿನಿಮಾಗಳಿಗೆ ಪ್ರೇಕ್ಷಕರು ಸಾಕಷ್ಟಿದ್ದಾರೆ ಎನ್ನುವುದು ರುಜುವಾತಾಯಿತು.

ಈ ವರ್ಷದ ಕೊನೆಯಲ್ಲಿ ‘ಟೈಗರ್ 3’ ತೆರೆಗೆ ಬರುವ ಸಾಧ್ಯತೆ ಇದೆ. ಸಲ್ಮಾನ್ ಖಾನ್ ಪಾಲಿಗೂ ಯಶಸ್ಸೊಂದು ಅಗತ್ಯವಿರುವುದರಿಂದ ಅದಕ್ಕಾಗಿ ಅನೇಕರು ಎದುರು ನೋಡುತ್ತಿದ್ದಾರೆ.

ಇಂತಹ ಜಾಯಮಾನದ ಕಥಾಸರಣಿಗೆ ಇನ್ನೊಂದು ಸೇರ್ಪಡೆ ‘ವಾರ್ 2’. ಈ ಸಲ ಹೃತಿಕ್ ರೋಷನ್ ಜತೆಗೆ ಟೈಗರ್ ಇರುವುದಿಲ್ಲ. ಬದಲಿಗೆ ತೆಲುಗಿನ ಜೂನಿಯರ್ ಎನ್‌ಟಿಆರ್ ಸೇರಿಕೊಳ್ಳುವ ನಿರೀಕ್ಷೆ ಇದೆ. ಈ ಕುರಿತು ಅವರ ಜತೆ ಮಾತುಕತೆಯೂ ನಡೆದಿದೆ.

‘ಆರ್‌ಆರ್‌ಆರ್’ ತೆಲುಗು ಸಿನಿಮಾ ಸೂಪರ್‌ಹಿಟ್ ಆದಮೇಲೆ ಜೂನಿಯರ್ ಎನ್‌ಟಿಆರ್ ಪ್ರೇಕ್ಷಕರ ಸಂಖ್ಯೆ ದೇಶದ ಉದ್ದಗಲಕ್ಕೂ ಹೆಚ್ಚಾಗಿದೆ. ಅವರ ನಟನಾ ಸಾಮರ್ಥ್ಯ ಮೆಚ್ಚಿಕೊಂಡವರು ಹಿಂದಿ ಮಾತನಾಡುವ ರಾಜ್ಯಗಳಲ್ಲಿಯೂ ಇದ್ದಾರೆ. ಇದನ್ನೇ ಬಂಡವಾಳ ಮಾಡಿಕೊಳ್ಳುವುದು ನಿರ್ಮಾಪಕ ಆದಿತ್ಯ ಚೋಪ್ರಾ ಉದ್ದೇಶ.

‘ಬ್ರಹ್ಮಾಸ್ತ್ರ: ಪಾರ್ಟ್ ಒನ್–ಶಿವ’ ನಿರ್ದೇಶಿಸಿದ್ದ ಅಯಾನ್ ಮುಖರ್ಜಿ ಈ ಚಲನಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳಲಿದ್ದಾರೆ. ‘ವೇಕ್ ಅಪ್ ಸಿದ್’, ‘ಯೇ ಜವಾನಿ ಹೈ ದಿವಾನಿ’ ತರಹದ ವೈವಿಧ್ಯಮಯ ಸಿನಿಮಾಗಳನ್ನು ಕೊಟ್ಟಿದ್ದ ಅವರು ‘ಬ್ರಹ್ಮಾಸ್ತ್ರ’ದಲ್ಲಿನ ಕೆಟ್ಟ ವಿಎಫ್‌ಎಕ್ಸ್‌ಗೆ ಟೀಕೆಗಳನ್ನು ಎದುರಿಸಿದರು. ಆದರೆ, ಬಾಕ್ಸ್‌ಆಫೀಸ್‌ನಲ್ಲಿ ಆ ಸಿನಿಮಾ ಕೂಡ ಹಿಟ್ ಎಂದೇ ಪಂಡಿತರು ವಿಶ್ಲೇಷಿಸಿದ್ದಾರೆ. ಪ್ರೇಕ್ಷಕರ ನಾಡಿಮಿಡಿತವನ್ನು ಬಲ್ಲ, ಮಾರುಕಟ್ಟೆ ಕಲ್ಪಿಸುವ ಜಾಣತನದಲ್ಲೂ ಮುಂದಿರುವ ಅಯಾನ್ ಮುಖರ್ಜಿಯನ್ನು ಆದಿತ್ಯ ಚೋಪ್ರಾ ನೆಚ್ಚಿಕೊಂಡಿದ್ದಾರೆ.

ಜೂನಿಯರ್ ಎನ್‌ಟಿಆರ್ ಒಪ್ಪಿ, ಹೃತಿಕ್ ಜೊತೆ ಕುಣಿದರೆ ಅದು ಪ್ರೇಕ್ಷಕರ ಪಾಲಿಗೆ ಹಬ್ಬವೇ ಹೌದು. ■